ಗಳನ್ನು ಸಾಗುವಳಿ ಮಾಡುವುದಕ್ಕೆ ಕೊಟ್ಟಿರುವುದು ನಿಜವೆ ?

ಅಧ್ಯಕ್ಷರು —ಉತ್ತರ ಹೇಳಿದ್ದಾರೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ —ಅಂಥ ಜಮೀನು ಗಳನ್ನು ಸಾಗುವಳಿ ಮಾಡುವುದಕ್ಕೆ ಸಾವಿರಾರು ರೂಪಾಯಿ ಅವರು ಖರ್ಚು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ನಂದರ್ಭ ಗಳಲ್ಲಿ ಮಾಡಿರುತ್ತೇವೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಅಂಥಾ ನಂದರ್ಭ ಗಳಲ್ಲಿ ಈ 5 ಎಕರೆ ನಿರ್ಬಂಧವನ್ನು ಗಮನಕ್ಕೆ ತೆಗೆದು ಕೊಳ್ಳದೇ ಅಷ್ಟು ಜಮೀನನ್ನೂ ಅವರಿಗೇ ಖಾಯಂ ಮಾಡುವುದಕ್ಕೆ ಆಗುವುದಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ:—ಈ ರೂಲ್ಸು ಹಿಂದೆ ಕೊಟ್ಟಿದ್ದಕ್ಕೆ ಅನ್ವಯಿಸುವುದಿಲ್ಲ.

Mr. SPEAKER.—The whole thing is under the consideration of the Government. Has the Hon'ble Member any other question ?

---

*Improvements to Srinivasa Sagara Tank in Chikballapur Taluk.*

*Q.*—566. Sri G. PAPANNA (Sidlaghatta-Chikballapur).—

Will the Government be pleased to state :—

(*a*) when was the estimate for the improvement of the Srinivasa Sagar Tank in Chikballapur Taluk sanctioned ;

(*b*) the amounts allotted in the Budget of each year to impliment this work ;

(*c*) the extent of work done so far?

*A.*—Sri KADIDAL MANJAPPA (Minister for Revenue and Public Works).—

(*a*) Not yet sanctioned.

(*b*) A sum of Rs. 20,000 was allotted in the budget for the year 1952-53.

(*c*) Does not arise in view of answer to (*a*).

ಶ್ರೀ ಜಿ. ಪಾಪಣ್ಣ.—ಅಂದಾಜು ಮಂಜೂರಾಗದೆ ಬಡ್ಜೆಟ್ಟಿನಲ್ಲಿ ಹಣ ಏಕೆ ಒದಗಿಸಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಅಂದಾಜ ಮಂಜೂ ರಾಗುತ್ತದೆ ಎಂಬ ನಿರೀಕ್ಷೆಯ ಮೇರೆ ಹಣ ಒದಗಿಸ ಲಾಗುತ್ತದೆ. ಈಗ ಅಂದಾಜು ಸರ್ಕಾರದವರಿಗೆ ಬಂದು ಪರಿಶೀಲನೆಯಲ್ಲಿದೆ.

ಶ್ರೀ ಜಿ. ಪಾಪಣ್ಣ.—ಇಷ್ಟು ನಿಧಾನವಾಗುತ್ತಾ ಇರುವುದಕ್ಕೆ ಕಾರಣ ?

ಶ್ರೀ ಕಡಿದಾಳ್ ಮಂಜಪ್ಪ.—ಅನೇಕ ಕಾರಣ ಗಳಿಂದ ನಿಧಾನವಾಗುತ್ತಾ ಇದೆ, ಅಲ್ಲ ನೀರು ಶೇಖರವಾಗುತ್ತದೆಯೇ ಎಂಬ ಪರಿಶೀಲನೆ ನಡೆಸ ಬೇಕಾಗಿದೆ.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ಅದು 5 ವರ್ಷದ ಯೋಜನೆಯಲ್ಲಿ ಸೇರಿದೆಯಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ಎಷ್ಟು ಲಕ್ಷ ರೂಪಾಯಿ ಮಂಜೂರು ಮಾಡಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಇನ್ನೂ ಅಂದಾಜ ಮಂಜೂರು ಮಾಡಿಲ್ಲ. ಸುಮಾರು 9 ಲಕ್ಷ ಚಿಲ್ಲರೆ ರೂಪಾಯಿ ಆಗುತ್ತದೆ.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—1892ನೇ ಇಸವಿಯ ಅಗ್ರಿಮೆಂಟಿನಲ್ಲಿ ಇದೂ ಬರುತ್ತದೆಯಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಬರುತ್ತದೆ.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ಹಾಗಾದರೆ ಇದಕ್ಕೆ ಏನು ಮಾಡುತ್ತೀರಿ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ಕೇಳಬೇಡಿ.

ಶ್ರೀ ಟಿ. ಮರಿಯಪ್ಪ.—1892ನೇ ಇಸವಿಯ ಅಗ್ರಿಮೆಂಟಿಗೆ ವಿರೋಧವಿಲ್ಲವೆಂದ ತಾನೆ ಪ್ಲಾನಿಂಗ್ ಕಮಿಷನ್ ಇದನ್ನು ಸೇರಿಸಿದ್ದು?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

---

*Breach of Giriyanna Settykere, Hanasavadi Village, Holalur Hobly.*

*Q.*—575. Sri S. R. NAGAPPA SETTY (Shimoga).—

Will the Government be pleased to state :—

(*a*) how many years ago the Giriyanna Setty kere of Hanasavadi Village, Holalur Hobli, Shimoga Taluk, breached;

(*b*) the extent of land irrigated under this tank;

(*c*) whether petition has been received from the raiyats requesting for the repairs of the tank ;

(*d*) whether an estimate has been prepared for repairing the tank ?

*A.*—Sri KADIDAL MANJAPPA (Minister for Revenue and Public Works).—

(*a*) About 48 years ago.

(*b*) 113 acres and 39 guntas.

(*c*) Yes.

(*d*) Yes.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಮಳೆಯ ನೀರಿನಿಂದ ವ್ಯವಸಾಯ ಮಾಡುವ ಜಮೀನಿಗೆ ಕಂದಾಯ ಕಡಿಮೆಯಲ್ಲವೆ ?

Sri KADIDAL MANJAPPA.—That is obvious, Sir.